# ಬಜೆಟ್ ಎಂದರೆ ನಿಜಕ್ಕೂ ಏನು?

ಬಜೆಟ್ ಅಂದರೆ ಅಂಕಿ– ಸಂಖ್ಯೆಗಳ ಆಟವಷ್ಟೇ ಆಗಿದೆಯೆ? ಆರ್ಥಿಕತೆಯನ್ನು ಸದೃಢಗೊಳಿಸಿ, ಜನರ ಜೀವನಮಟ್ಟ ಎತ್ತರಿಸುವ ಬಜೆಟ್ ಬದಲಾಗಿ, ಚುನಾವಣೆಯಲ್ಲಿ ಮತ ಗಳಿಕೆಯನ್ನೇ ಗುರಿಯಾಗಿಸಿಕೊಂಡ ರಿಯಾಯ್ತಿಯ ಬಜೆಟ್‌ಗಳು ಅನಿವಾರ್ಯವೆ? ಏರುತ್ತಿರುವ ಹಣದುಬ್ಬರ ಮತ್ತು ಕಪ್ಪುಹಣದ ಆಟಾಟೋಪವನ್ನು ತಡೆಯಲಾಗದ ಸರಕಾರಗಳು, ಸಬ್ಸಿಡಿಗಳ ಕಣ್ಣೊರಸುವಿಕೆಗಷ್ಟೇ ಬಜೆಟನ್ನು ಸೀಮಿತವಾಗಿ ಇರಿಸಿವೆಯೆ? ಆರ್ಥಿಕ ಅಪರಾಧಗಳನ್ನು ತಡೆಯುವ, ಅನಗತ್ಯ ಖರ್ಚು– ವೆಚ್ಚಗಳ ಮೂಲಕ ಸಾರ್ವಜನಿಕರ ಹಣ ಲೂಟಿ ಹೊಡೆಯುವ ಪ್ರವೃತ್ತಿಯನ್ನು ಸರಕಾರಗಳು ಲಘುವಾಗಿ ಪರಿಗಣಿಸುತ್ತಿವೆಯೆ? 'ಬಿಳಿಯಾನೆ'ಗಳಾಗುತ್ತಿರುವ ಸರಕಾರಗಳ ಖರ್ಚು ಕಡಿಮೆ ಮಾಡುವ ಬಗ್ಗೆ ಬಜೆಟ್‌ನಲ್ಲಿ ಯಾವ ಪ್ರಸ್ತಾಪವೂ ಏಕಿಲ್ಲ?

–ಕೇಂದ್ರ ಮತ್ತು ರಾಜ್ಯ ಸರಕಾರಗಳೆರಡೂ ಇತ್ತೀಚೆಗೆ ಮಂಡಿಸಿದ 2011–12ರ ಸಾಲಿನ ಮುಂಗಡಪತ್ರಗಳನ್ನು ಗಮನಿಸಿದಾಗ ಮೇಲಿನ ಪ್ರಶ್ನೆಗಳು ಏಳುತ್ತವೆ. ಅಂಕಿ– ಸಂಖ್ಯೆಗಳ ಆಟದಲ್ಲಿ ಕೇವಲ 'ಭರವಸೆಗಳ ಬುರುಡೆ' ಬಿಡುವ ಕೆಲಸವಷ್ಟೇ ಆಗಿದೆ ಅನ್ನಿಸುವಂತಿದೆ.

'ಬಜೆಟ್ ಅಂದರೆ ಜನಸಾಮಾನ್ಯರಿಗೆ ಏನೂ ಗೊತ್ತಾಗುವುದಿಲ್ಲ. ಅವೆಲ್ಲ ಆರ್ಥಿಕ ತಜ್ಞರಿಗೆ ಮಾತ್ರ ಅರ್ಥವಾಗುವಂತಹದ್ದು' ಎಂಬ ಅಭಿಪ್ರಾಯ  ಬಲವಾಗುತ್ತಿದೆ. ಅದಕ್ಕೆ ತಕ್ಕಂತೆ ಮಾಧ್ಯಮಗಳೂ 'ತೆರಿಗೆ ಏರಿದ್ದು, ತೆರಿಗೆ ಇಳಿಸಿದ್ದು' ಎಂಬ ಎರಡು ಲೆಕ್ಕಗಳನ್ನಷ್ಟೇ ಕೊಟ್ಟು ಅಷ್ಟರಲ್ಲೇ ಬಜೆಟ್‌ನ ಗುಣಾವಗುಣಗಳನ್ನು ಪಟ್ಟಿ ಮಾಡುತ್ತಿವೆ. 'ಸದ್ಯ ತೆರಿಗೆ ಏರಿಸದಿದ್ದರೆ ಸಾಕಪ್ಪ' ಎಂದು ಜನಸಾಮಾನ್ಯ ನಿಟ್ಟುಸಿರು ಬಿಡುವುದು ಸಹಜವೇ. ಆದರೆ ತೆರಿಗೆ ಏರಿಸುವ ಪರಿಸ್ಥಿತಿ ಏಕೆ ಬಂದಿದೆ? ಸರಕಾರ ನಡೆಸುವವರ ಖರ್ಚು–ವೆಚ್ಚ ಏಕೆ ಏರುತ್ತಿದೆ.. ಎಂಬ ಬಗ್ಗೆ ಯಾರೂ ಯೋಚಿಸುತ್ತಿಲ್ಲ.

ಒಂದು ಮನೆಯ ಆದಾಯ– ಖರ್ಚುಗಳನ್ನು ಸಾಮಾನ್ಯ ಗೃಹಿಣಿಯೊಬ್ಬಳು ಬುದ್ಧಿವಂತಿಕೆಯಿಂದ ತೂಗಿಸಿಕೊಂಡು ಹೋಗುತ್ತಿರಬೇಕಾದರೆ ನಮ್ಮ ಅರ್ಥಸಚಿವರಿಗೆ ಅದೇಕೆ ಸಾಧ್ಯವಾಗುತ್ತಿಲ್ಲ? ಮನೆಯಲ್ಲಿ ಅನಗತ್ಯ ವೆಚ್ಚಗಳನ್ನು ಕಡಿಮೆ ಮಾಡಿ, ಆದಾಯ ಹೆಚ್ಚಿಸುವ ದಾರಿಗಳನ್ನು ಗೃಹಿಣಿಯೊಬ್ಬಳು ಕಂಡುಕೊಳ್ಳುತ್ತಾಳೆ. ಆದರೆ ಸರಕಾರ ನಡೆಸುವವರು, ಯಾವ ಕಾಳಜಿಯೂ ಇಲ್ಲದೆ ಸರಕಾರದ ಖರ್ಚುವೆಚ್ಚಗಳನ್ನು ಏರಿಸುತ್ತಲೇ ಹೋಗುತ್ತಾರೆ. ಖರ್ಚಿಗಾಗಿ ಆಂತರಿಕ ಆದಾಯ ಹುಟ್ಟದಿದ್ದರೆ, ಹೊರದೇಶಗಳಿಂದ ಮನಸೋ ಇಚ್ಛೆ ಸಾಲ ತರುವ ಪ್ರವೃತ್ತಿಯೂ ಬೆಳೆಯುತ್ತಿದೆ. ಆಡಳಿತ ವೆಚ್ಚ ಅನಗತ್ಯ ಏರಬಾರದೆಂದು ಹಿಂದೆ ಮಂತ್ರಿಗಳ ಸಂಖ್ಯೆಯನ್ನು ಶಾಸಕರ ಸಂಖ್ಯೆಗೆ ಅನುಗುಣವಾಗಿ 35ಕ್ಕೆ ಸೀಮಿತಗೊಳಿಸಲಾಯಿತು. ಆದರೆ ಕಾರು, ಫೋನು, ಮನೆ, ಭತ್ಯೆ, ಸಿಬ್ಬಂದಿ ಮುಂತಾಗಿ ಮಂತ್ರಿಗಳ ಎಲ್ಲ ಸೌಲಭ್ಯಗಳನ್ನೂ ಪಡೆಯುವ ನಿಗಮ–ಮಂಡಳಿಗಳ ಅಧ್ಯಕ್ಷರ ಸಂಖ್ಯೆ ಏರುತ್ತಿದೆ; ಖರ್ಚುಗಳೂ ಹೆಚ್ಚಾಗುತ್ತಿವೆ! ಎಲ್ಲಕ್ಕೂ ಒಂದೊಂದು ನಿಗಮ– ಮಂಡಳಿಗಳನ್ನೇ ಸ್ಥಾಪಿಸಿದರೆ, ಮಂತ್ರಿಗಳಿಗೇನು ಕೆಲಸವಿದೆ? ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯ್ತಿ, ಗ್ರಾಮಮಟ್ಟದಲ್ಲಿ ಗ್ರಾಮಪಂಚಾಯ್ತಿಗಳು ಯಶಸ್ವಿಯಾಗಿ ಕೆಲಸ ಮಾಡುತ್ತಿದ್ದರೆ, ಕೆಲಸವೇ ಇಲ್ಲದೆ ಕೇವಲ ಭತ್ಯೆ– ಸಂಬಳಗಳಿಗೆಂದೇ ಸ್ಥಾಪನೆಯಾಗಿರುವ ತಾಲ್ಲೂಕು ಪಂಚಾಯ್ತಿಗಳೇಕೆ ಬೇಕು? ಇವೆಲ್ಲ ಅನಗತ್ಯ ಖರ್ಚುಗಳಲ್ಲವೆ?

ಎರಡೂವರೆ ವರ್ಷಗಳ ಹಿಂದೆ 50 ಸಾವಿರ ಕೋಟಿ ರೂಪಾಯಿಯಷ್ಟಿದ್ದ ರಾಜ್ಯದ ಸಾಲದ ಮೊತ್ತ, ಈಗ 98 ಸಾವಿರ ಕೋಟಿಗೇರಿದೆ. ಬಜೆಟ್‌ನ ಪ್ರತಿ ರೂಪಾಯಿ ಗಳಿಕೆಯಲ್ಲಿ 11ಪೈಸೆ ಬಡ್ಡಿ ತೀರಿಸಲೆಂದೇ ಹೋಗುತ್ತಿದೆ. ಆದಾಯದಲ್ಲಿ ಮತ್ತೆ 18 ಪೈಸೆ ಸಾಲ ಪಡೆದೇ ತರುತ್ತಿದ್ದೇವೆ. ಸಾಲ ತಂದು ಮಂತ್ರಿ–ಮಾಗಧರು, ಅಧಿಕಾರಿಗಳು ತುಪ್ಪ ತಿನ್ನುವ ಕೆಲಸವಷ್ಟೇ ಆಗುತ್ತಿದೆಯೆ? ಸಾಲದಿಂದ ಆದ ಅಭಿವೃದ್ಧಿಯ ಲೆಕ್ಕವನ್ನೇಕೆ ಪ್ರತ್ಯೇಕವಾಗಿ ಬಜೆಟ್‌ಗಳಲ್ಲಿ ನೀಡಬಾರದು?

ಕರ್ನಾಟಕ ಸರಕಾರ ಈ ವರ್ಷ 85,319 ಕೋಟಿ ರೂಪಾಯಿಗಳ ಬಜೆಟ್ ಮಂಡಿಸಿದೆ. ಇದರಲ್ಲಿ ಅಂದಾಜು ಶೇಕಡಾ 29ರಷ್ಟು ಮಾತ್ರ ಯೋಜನೆಗೆ ಖರ್ಚಾಗುತ್ತದೆ. ಉಳಿದದ್ದು ಯೋಜನೇತರ ವೆಚ್ಚ! 12,482 ಕೋಟಿ ರೂಪಾಯಿಗಳ ಆರ್ಥಿಕ ಕೊರತೆಯನ್ನು ತುಂಬಲು, ಪ್ರಜೆಗಳ ಮೇಲೆ ತೆರಿಗೆ ಹೇರುವುದೊಂದೇ ದಾರಿ. ಹೋಗಲಿ, ಯೋಜನೆಗೆಂದೇ ಇಟ್ಟ ಹಣ ಖರ್ಚಾಗುತ್ತದೆಯೆ? ಆ ಮೂಲಕ ಉತ್ಪಾದಕತೆ ಹೆಚ್ಚಿ ಹೊಸ ಆದಾಯ ಹುಟ್ಟುತ್ತದೆಯೆ? 2008–09ರಲ್ಲಿ ಮಂಡಿಸಿದ 68,535 ಕೋಟಿ ರೂ. ಮೊತ್ತದ ಬಜೆಟ್‌ನಲ್ಲಿ 13,600 ಕೋಟಿ ರೂ. ಖರ್ಚಾಗಿಯೇ ಇಲ್ಲ. 2009–10ರಲ್ಲಿ 76,399 ಕೋಟಿ ರೂ. ಬಜೆಟ್ ಮಂಡಿಸಿದ್ದು ಅದರಲ್ಲೂ 11,878 ಕೋಟಿ ರೂಪಾಯಿ ಖರ್ಚಾಗಿಲ್ಲ! ಅಂದರೆ, ಬಜೆಟ್ ಭಾಷಣದ ವೇಳೆ ಅನಗತ್ಯವಾಗಿ ಅಂಕಿ ಸಂಖ್ಯೆಗಳನ್ನು ಹಿಗ್ಗಿಸಿ ಹೇಳಿ, ಅರ್ಥತಜ್ಞರ ಶಹಬ್ಬಾಸ್‌ಗಿರಿ ಪಡೆಯುವುದಷ್ಟೇ ಆಗುತ್ತಿದೆಯೆ?

ಕೇಂದ್ರವಂತೂ 'ಆರ್ಥಿಕ ಹಗರಣ'ಗಳಲ್ಲಿ ಹೂತುಹೋಗಿದೆ. ಭ್ರಷ್ಟಾಚಾರ ಮುಗಿಲುಮುಟ್ಟಿದೆ. ಆಡಳಿತದ ಮೇಲೆ ಪ್ರಧಾನಿಗೆ ಯಾವ ನಿಯಂತ್ರಣವೂ ಇಲ್ಲವೆ.. ಎಂಬ ಅನುಮಾನ ಹುಟ್ಟುವಂತಿದೆ. ತೆರಿಗೆವಂಚಕರು ವಿದೇಶಗಳಲ್ಲಿ ಕಪ್ಪುಹಣ ಕೂಡಿಟ್ಟಿರುವುದು ಗೊತ್ತಾದರೂ ಸರಕಾರ ಅಸಹಾಯಕವಾಗಿದೆ. ಇಂಥ ಸ್ಥಿತಿಯಲ್ಲಿ ಬಜೆಟ್ ಕೋಟಿ ಕೋಟಿ ಲೆಕ್ಕಗಳಿಗೆ ಏನಾದರೂ ಅರ್ಥವಿದೆಯೆ?

■ ಬಿ.ಎಂ. ಹನೀಫ್

**ಎರಡೂವರೆ ವರ್ಷಗಳ ಹಿಂದೆ 50 ಸಾವಿರ ಕೋಟಿ ರೂಪಾಯಿಯಷ್ಟಿದ್ದ ರಾಜ್ಯದ ಸಾಲದ ಮೊತ್ತ, ಈಗ 98 ಸಾವಿರ ಕೋಟಿಗೇರಿದೆ. ಬಜೆಟ್‌ನ ಪ್ರತಿ ರೂಪಾಯಿ ಗಳಿಕೆಯಲ್ಲಿ 11ಪೈಸೆ ಬಡ್ಡಿ ತೀರಿಸಲೆಂದೇ ಹೋಗುತ್ತಿದೆ. ಆದಾಯದಲ್ಲಿ ಮತ್ತೆ 18 ಪೈಸೆ ಸಾಲ ಪಡೆದೇ ತರುತ್ತಿದ್ದೇವೆ. ಸಾಲ ತಂದು ಮಂತ್ರಿ-ಮಾಗಧರು, ಅಧಿಕಾರಿಗಳು ತುಪ್ಪ ತಿನ್ನುವ ಕೆಲಸವಷ್ಟೇ ಆಗುತ್ತಿದೆಯೆ? ಸಾಲದಿಂದ ಆದ ಅಭಿವೃದ್ಧಿಯ ಲೆಕ್ಕವನ್ನೇಕೆ ಪ್ರತ್ಯೇಕವಾಗಿ ಬಜೆಟ್‌ಗಳಲ್ಲಿ ನೀಡಬಾರದು?**

